## ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ -396/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲಕ್ಷ್ಮೀ | ಸಿಡಬ್ಲ್ಯೂ 3 |
| ತಂದೆಯ ಹೆಸರು | - | ತೀಮ್ಮರಾಜು | ಪಿಡಬ್ಲ್ಯೂ 2 |
| ವಯಸ್ಸು | - | 31 ವರ್ಷ | |
| ಕೆಲಸ | - | ಆಸ್ಪತ್ರೆಯ ಸಿಬ್ಬಂದಿ | ಸಾ.ಪ್ರ.ಬೋ |
| ವಾಸ | - | ಕೆ ಆರ್ ನಗರ | ದಿ. 06.01.2020 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಚಾಸಾ 1 ನನ್ನ ತಾಯಿ. ಆರೋಪಿ 1 ರಿಂದ 3 ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು. ದಿನಾಂಕ 18-05-2011 ರಂದು ರಾತ್ರಿ 10.30 ಗಂಟೆಯಲ್ಲಿ ನಾನು ಮತ್ತು ಚಾಸಾ 1 ಮನೆಯಲ್ಲಿದ್ದಾಗ ಆರೋಪಿತರು ಅಲ್ಲಿಗೆ ಬಂದಿರುತ್ತಾರೆ, 2 ನೇ ಆರೋಪಿ ಮುಂಡೆ ಎಂದು ಬೈದು ಏಕಾಏಕಿ ಮನೆಯೊಳಗೆ ನುಗ್ಗಿರುತ್ತಾರೆ. ಏಕೆ ಮನೆ ಒಳಗೆ ಬಂದಿದ್ದಿರಾ ಎಂದು ಕೇಳಿದ್ದಕ್ಕೆ ನನ್ನ ತಾಯಿಯ ಬಲಗಾಲಿನ ಪಾದಕ್ಕೆ ಹೊಡೆದು ಗಾಯ ಮಾಡಿರುತ್ತಾರೆ. ತೆಂಗಿನ ಗುದಮಟ್ಟೆಯಿಂದ 2 ಮತ್ತು 3 ನೇ ಆರೋಪಿತರು ಚಾಸಾ 1 ಮತ್ತು ನನಗೆ ಹೊಡೆದಿರುತ್ತಾರೆ. ನಂತರ 3 ಜನ ಆರೋಪಿತರು ಹೊಡೆದು ನೋವುಂಟು ಮಾಡಿರುತ್ತಾರೆ. ಆಗ ಆರೋಪಿತರು ಕಲ್ಲು ಮತ್ತು ಗದಮಟ್ಟೆಯನ್ನು ಅಲ್ಲೇ ಬಿಸಾಡಿ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಹೋಗಿರುತ್ತಾರೆ.

2) ದಿನಾಂಕ 19-05-2011 ರ ಬೆಳಗಿನ ಜಾವ 9.30 ಗಂಟೆಗೆ ರಾಣಿ, ರಾಜೇಶ್ವರಿ ಮತ್ತು ಸರೋಜಾ ಎಂಬುವರು ಮತ್ತು ಆರೋಪಿತರು ಮನೆಯ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈದು ಮನೆ ಖಾಲಿ ಮಾಡಿ ಎಂದು ಹೇಳಿರುತ್ತಾರೆ. ನಂತರ ಆರೋಪಿತರು ನನಗೂ ಮತ್ತು ನನ್ನ ತಾಯಿಗೆ ಹೊಡೆದು ನೋವುಂಟು ಮಾಡಿರುತ್ತಾರೆ. ಮುಮಾ 1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. 2 ನೇ ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು 2 ನೇ ಆರೋಪಿಯನ್ನು ಗುರುತಿಸಲು

ತಕರಾರು ಮಾಡಿರುವುದಿಲ್ಲ. ಸರೋಜಾ, ರಾಣಿ, ರಾಜೇಶ್ವರಿ ಹುಣಸೂರಿನಲ್ಲಿ ವಾಸ ಮಾಡುತ್ತಾರೆ. ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ.

ಈ ಹಂತದಲ್ಲಿ ಶ್ರೀ ಎಪಿಪಿಯವರು ಕಲಂ 319 ಸಿ ಆರ್ ಪಿ ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಲು ಕಾಲಾವಕಾಶ ಕೋರಿದ್ದು ಮುಂದಿನ ಮುಖ್ಯ ವಿಚಾರಣೆ ಮುಂದೂಡಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ